'ಇದಕ್ಕೆ ಬಿಸಿಲು ಸಾಕಾಗೋದಿಲ್ಲ. ಈ ಮರದ ನೆರಳು ಜಾಸ್ತಿ. ಸ್ವಲ್ಪ ಕಡಿಸಿಬಿಡಿ ಇದನ್ನು' ಎಂದ. ನಾವು ಆತನ ಮಾತನ್ನು ಈ ಕಿವಿಯಿಂದ ಕೇಳಿ ಆ ಕಿವಿಯಿಂದ ಬಿಟ್ಟೆವು. ಸ್ವಲ್ಪ ದಿನಗಳಲ್ಲೇ ಎರಡನೇ ಬಾರಿ ಹಾಕಿಸಿದ ಹುಲ್ಲುಹಾಸು ಹಾಳಾಗಿಹೋಯಿತು. ಪುನಃ ದುಡ್ಡು ಖರ್ಚು ಮಾಡಲು ಮನಸ್ಸು ಒಪ್ಪಲಿಲ್ಲ. ಒಂದೆರಡು ವರ್ಷದ ನಂತರ ಆ ಜಾಗದಲ್ಲಿ ಟೈಲ್ಸ್ ಹಾಕಿಸಿ, ಹುಲ್ಲುಹಾಸಿನ ಆಸೆಯನ್ನೇ ಬಿಟ್ಟುಬಿಟ್ಟೆವು. ಹುಲ್ಲುಹಾಸಿಲ್ಲವೆಂದು ಮಕ್ಕಳಿಗೂ ನಿರಾಸೆಯಾಯಿತು.

ಎರಡು ಮೂರು ವರ್ಷಗಳು ಉರುಳಿದವು. ಮಕ್ಕಳು ಬೆಳೆಯುತ್ತಾ ಬಂದಂತೆ ಆ ಮರವೂ ಬೆಳೆಯತೊಡಗಿತು. 'ಹಲವು ಕೊಂಬೆಗಳ ಚಾಚಿಕೊಂಡರೂ ಮರಕ್ಕೆ ಬುಡ ಒಂದೇ' ಎಂಬ ಕವಿವಾಣಿಯನ್ನು ನೆನಪಿಸುವಂತೆ ಆ ಮರದ ಬುಡ ಇನ್ನಷ್ಟು ದಪ್ಪವಾಯಿತು. ಅದರ ಕೊಂಬೆಗಳು ಕಬಂಧ ಬಾಹುಗಳಂತೆ ಉದ್ದುದ್ದಕ್ಕೆ ಚಾಚತೊಡಗಿದವು. ಚಾಚಿದ ಉದ್ದುದ್ದ ಕೊಂಬೆಗಳ ಮಧ್ಯೆ ಮಧ್ಯೆ ಟಿಸಿಲೊಡೆದು ಮರಿ ಕೊಂಬೆಗಳು ಬೆಳೆಯತೊಡಗಿದವು. ಮರವೀಗ ಉದ್ದುದ್ದ ಮಾತ್ರವಲ್ಲದೆ ಅಡ್ಡಡ್ಡವೂ ಬೆಳೆಯತೊಡಗಿತು. ಇಲ್ಲಿಂದ ಶುರುವಾಯಿತು ಸಮಸ್ಯೆ... ಮರ ಬೆಳೆಯುತ್ತಿದ್ದಂತೆ ಅದರ ಬುಡ, ಮನೆಯ ಮುಂದೆ, ತಾರಸಿ ಮೇಲೆ ಅದರ ಕಸದ ರಾಶಿ ಬೆಳೆಯತೊಡಗಿತು. ಗುಡಿಸಿಹಾಕಿದ ಒಂದೆರಡು ಗಂಟೆಗಳಲ್ಲೇ ಪುಟ್ಟಮಕ್ಕಳು ಮಾಡುವಂತೆ ಮತ್ತೆ ಕಸ ಬೀಳುತ್ತಿತ್ತು. 'ಮನೆಯೊಳಗೆ ಕೆಲ್ಸ ಎಷ್ಟು ಬೇಕಾದರೂ ಮಾಡ್ಬೋದು, ಈ ಮರದ ಕಸ ಮಾತ್ರ ಗುಡಿಸಲಿಕ್ಕೆ ಆಗಲ್ಲ. ಇದನ್ನು ಗುಡಿಸೋ ಟೇಮಿನಲ್ಲಿ ಎರಡು ಮನೆ ಕೆಲ್ಸ ಆಗುತ್ತೆ' ಅಂತ ಬೆಳಗ್ಗೆ ಕೆಲಸದವಳು ಗೊಣಗುತ್ತಾ ಅದನ್ನು ಒಟ್ಟುಮಾಡುವುದರಲ್ಲಿ ಸುಸ್ತೋ ಸುಸ್ತು. ಅವಳು ಬರದಿದ್ದಾಗ ಆ ಮರದ ಕಸ ಗುಡಿಸಿ ತೆಗೆಯುವಷ್ಟರಲ್ಲಿ ಬೆನ್ನು, ಸೊಂಟ ನೋವು ಶುರುವಾಗಿ ಸಾಕಪ್ಪಾ ಸಾಕು ಈ ಮರದ ಸಹವಾಸ ಎಂದೆನಿಸುತ್ತಿತ್ತು. 'ಮರದ ಕೊಂಬೆಗಳ ತುದಿಗಳನ್ನು ಮಾತ್ರ ಕತ್ತರಿಸಿ, ಹೇಗಿದ್ರೂ ಮತ್ತೆ ಚಿಗುರುತ್ತೆ' ಎಂದು ಒಂದಿಬ್ಬರು ಕೊಟ್ಟ ಸಲಹೆಯಂತೆ ಮರ ಕಡಿಯುವವನಿಗೆ ಹೇಳಿ ಕೊಂಬೆಗಳ ತುದಿ ಮಾತ್ರ ಕತ್ತರಿಸಲು ಹೇಳಿದೆವು. 'ಒಂದೆರಡು ದಿನ ಬಿಟ್ಟು ಬರುತ್ತೇನೆ' ಎಂದ ಆತ.

ಹತ್ತಿರದ ಬಂಧು ಒಬ್ಬರು ತೀರಿಕೊಂಡಿದ್ದರಿಂದ ಎರಡು ದಿನಗಳ ನಂತರ ನಮಗೆ ಸಂತಾಪ ಸೂಚಕ ಸಭೆಗೆ ಹೋಗುವುದಿತ್ತು. ಮಕ್ಕಳನ್ನು ಶಾಲೆಗೆ ಕಳಿಸಿ ನಾವಿಬ್ಬರು ಅಲ್ಲಿಗೆ ಹೋಗಿದ್ದೆವು. ಮಧ್ಯಾಹ್ನ ಸುಮಾರು ಮೂರೂವರೆ ಹೊತ್ತಿಗೆ ನಮ್ಮ ದೊಡ್ಡ ಮಗನಿಂದ ಫೋನ್! 'ಅಮ್ಮಾ, ಮರ ಪೂರ್ತಿ ಕಡಿದುಬಿಡುತ್ತಾರೇನೋ. ಕಡಿದಿದ್ದು ಸಾಕು ಅಂತ ಹೇಳಮ್ಮಾ' ಅಂತ ಅಳುವ ಧ್ವನಿಯಲ್ಲಿ ಹೇಳುತ್ತಿದ್ದ. ನನಗೂ ಕರುಳು ಕಿವುಚಿದಂತಾಯ್ತು. ಮರ ಕಡಿಯುವವನಿಗೆ ಫೋನ್ ಮಾಡಿ, 'ಈಗ ಎಷ್ಟು ಕಡಿದಿದ್ದೀಯೋ ಅಷ್ಟು ಸಾಕು. ಇನ್ನು ಕಡಿಯಬೇಡ' ಎಂದು ಹೇಳಿದ್ದಾಯ್ತು. ಮನೆಗೆ ಬಂದು ನೋಡಿದಾಗ ಸ್ವಲ್ಪ ಸಮಾಧಾನವಾಯಿತು – 'ಸದ್ಯ ಮರವನ್ನು ಪೂರ್ತಿ ಕಡಿದುಹಾಕಿಲ್ಲವಲ್ಲಾ' ಎಂದು. 'ಮರ ಕಡಿಯಲು ಇನ್ಯಾರಿಗೂ ಹೇಳುವುದು ಬೇಡ' ಎಂದರು ನನ್ನವರು. ಮರದ ಕೊಂಬೆಗಳ ತುದಿ ಕತ್ತರಿಸಿದ್ದರಿಂದ ಕಸ ಕಡಿಮೆಯಾಗಿತ್ತು. ಕೆಲಸದವಳಿಗೂ ಖುಷಿಯಾಗಿತ್ತು.

ವರ್ಷ ಕಳೆಯುವಷ್ಟರಲ್ಲೇ ಆ ಮರ ಚಿಗುರಿಕೊಂಡು ನಳನಳಸತೊಡಗಿತು. ಪುನಃ ಬೀಳತೊಡಗಿತು ಕಸದ ರಾಶಿ! ಋತುಮಾನಕ್ಕೆ ತಕ್ಕಂತೆ ಅದರ ಕಸದಲ್ಲೂ ಬದಲಾವಣೆ. ವರ್ಷ ಋತುವಿನಲ್ಲಿ ಮಳೆ ಸುರಿಯತೊಡಗಿದಂತೆ ಅದರ ಕೆಂಪು ಹೂಗಳು ಉದುರಿಬಿದ್ದು ಕಂದು ಬಣ್ಣಕ್ಕೆ ತಿರುಗಿ ಅಪ್ಪಚ್ಚಿಯಾಗಿ ನೆಲಕ್ಕೆ ಅಂಟಿಕೊಂಡು ಕೊಳೆತ ವಾಸನೆ ಬರುವುದು, ಹೇಮಂತ ಋತುವಿನಲ್ಲಿ ಚಳಿ ಶುರುವಾದೊಡನೆ ಎಲೆಗಳು ಉದುರುವುವು, ವಸಂತ ಋತುವಿನ ಬೇಸಿಗೆಯಲ್ಲಿ ಅದರ ಕಾಯಿಗಳು, ಬೀಜಗಳು ಉದುರುವುವು. ಬೀಜಗಳು ಸಬ್ಬಕ್ಕಿ ಸಂಡಿಗೆಯಂತೆ ಹಗುರವಾಗಿದ್ದು ಮನೆಯ ಒಳಗೂ, ಹೊರಗೂ ಹಾರಿಬರುತ್ತಿದ್ದವು. ಅಂತೂ ವರ್ಷಪೂರ್ತಿ ಆ ಮರದ ಕಸವೋ ಕಸ. ಎಷ್ಟೋ ಬಾರಿ ಕೆಳಗೆ ಬಿದ್ದ